ದೂರವಾಣಿ:0820-2574925(ಕ), 2532700(ಮ),
2524926(ಫ್ಯಾ),

ಕರ್ನಾಟಕ ಸರ್ಕಾರ

ಇಮ್ಮೈಲ್:deo.udupi@gmail.com ವೆಬ್ ಸೈಟ್ :www.udupi.nic.in

# ಜಿಲ್ಲಾಧಿಕಾರಿಯವರ ಕಛೇರಿ ,ಉಡುಪಿ ಜಿಲ್ಲೆ ,ಮಣಿಪಾಲ

ಎ.ಡಿ.ಎಂ.ಸಿಆರ್ 01/2016/ 1753 ದಿನಾಂಕ: 09.09.2016

## ಅಧಿಕೃತ ಜ್ಞಾಪನ

ವಿಷಯ: ಬಕ್ರೀದ್ ಹಬ್ಬಕ್ಕೆ ದಿನಾಂಕ: 13.09.2016 ರಂದು ಘೋಷಿಸಲಾದ ಸರ್ಕಾರಿ ರಜೆಯನ್ನು ಬದಲು ಗೊಳಿಸಿ ಉಡುಪಿ ಜಿಲ್ಲೆಗೆ ದಿನಾಂಕ: 12.09.2016 ರಂದು ಸಾರ್ವತ್ರಿಕ ರಜೆಯನ್ನು ಘೋಷಿಸುವ ಬಗ್ಗೆ

ಉಲ್ಲೇಖ 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 32 ಹೆಚ್ ಹೆಚ್ ಎಲ್ ದಿನಾಂಕ: 07.09.2016
2. ಶ್ರೀ ಪ್ರಮೋದ್ ಮಧ್ವರಾಜ್, ಮಾನ್ಯ ಮೀನುಗಾರಿಕೆ ಹಾಗೂ ಯುವಜನ ಸಬಲೀಕರಣ ಮತ್ತು ಕ್ರೀಡೆ ರಾಜ್ಯ ಸಚಿವರು ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು ಇವರ ಟಿಪ್ಪಣಿ ಸಂಖ್ಯೆ: ಮೀ.ಯು.ಸ.ಕ್ರಿ.ಸ;ಆಪ್ತಶಾಖೆ ಜಿ.77/16-17 ದಿನಾಂಕ: 08.09.2016.
3. ಶ್ರೀ ಹಬೀಬ್ ಆಲಿ ವಕೀಲರು ಹಾಗೂ ಅಧ್ಯಕ್ಷರು, ಬದ್ರಿಯಾ ಜುಮ್ಮಾ ಮಸೀದಿ, ಸಂತೋಷ ನಗರ ಉಡುಪಿ ಇವರ ಮನವಿ ದಿನಾಂಕ: 08.09.2016
4. ಪ್ರಧಾನ ಕಾರ್ಯದರ್ಶಿಗಳು, ಉಡುಪಿ ಜಿಲ್ಲಾ ಮುಸ್ಲಿಂ ಒಕ್ಕೂಟ(ರಿ) ಉಡುಪಿ ಜಿಲ್ಲೆ ಇವರ ಮನವಿ ದಿನಾಂಕ 8.09.2016
5. ಉಪ ನಿರ್ದೇಶಕರು, ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ ಉಡುಪಿ ಇವರ ಪತ್ರ ಸಂಖ್ಯೆ ಬಿ1: ಇತರೆ /2016.17 ದಿನಾಂಕ 8.09.2016
6. ಅಧ್ಯಕ್ಷರು, ಜಿಲ್ಲಾ ವಕ್ಫ್ ಕಮಿಟಿ, ಉಡುಪಿ ಇವರ ಪತ್ರ ಸಂಖ್ಯೆ ಡಿಡಬ್ಲ್ಯೂ ಎಸಿ/ಉಡುಪಿ/365/ ಚಯರ್ಮೆನ್/2015.16 ದಿನಾಂಕ 8.09.2016.
7. ಸುನ್ನಿ ಸಂಯುಕ್ತ ಜಮಾತ (ರಿ) ಉಚ್ಚಿಲ ಇವರ ಮನವಿ ದಿನಾಂಕ: 8.09.2016

****************

ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಬಕ್ರೀದ್ ಹಬ್ಬವನ್ನು ದಿನಾಂಕ: 13.09.2016 ರಂದು ಆಚರಿಸುವ ಬಗ್ಗೆ ರಾಜ್ಯಾದ್ಯಂತ ಸಾರ್ವತ್ರಿಕ ಸರ್ಕಾರಿ ರಜೆಯನ್ನು ಘೋಷಣೆ ಮಾಡಲಾಗಿದೆ.

ಉಲ್ಲೇಖ(5)ರ ಪತ್ರದಲ್ಲಿ ಉಪ ನಿರ್ದೇಶಕರು, ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ ಉಡುಪಿ ಇವರು ದಿನಾಂಕ: 13.09.2016 ರಂದು ಉಡುಪಿ ಜಿಲ್ಲೆಯಲ್ಲಿ ಬಕ್ರೀದ್ ಹಬ್ಬವನ್ನು ಆಚರಣೆ ಮಾಡುವ ಬಗ್ಗೆ ಉಲ್ಲೇಖಿತ (1)ರ ಸರ್ಕಾರದ ಆದೇಶದಲ್ಲಿ ಘೋಷಣೆ ಮಾಡಲಾಗಿದ್ದು, ಬಕ್ರೀದ್ ಹಬ್ಬವನ್ನು ಉಡುಪಿ ಜಿಲ್ಲೆಯಲ್ಲಿ ದಿನಾಂಕ: 12.09.2016ರಂದು ಆಚರಿಸುವುದರಿಂದ ಸದ್ರಿ ದಿನಾಂಕ 13.09.2016ರ ಬದಲು ದಿನಾಂಕ: 12.09.2016 ರಂದು ಸಾರ್ವತ್ರಿಕ ರಜೆ ನೀಡುವಂತೆ ಮನವಿ ಸಲ್ಲಿಸಿರುತ್ತಾರೆ ಹಾಗೂ ಉಲ್ಲೇಖ (2)(3)(4)(6)(7) ರ ಪತ್ರದಲ್ಲಿ ಉಡುಪಿ ಜಿಲ್ಲೆಗೆ ದಿನಾಂಕ: 12.09.2016 ರಂದು ಬಕ್ರೀದ್ ರಜೆಯನ್ನು ಘೋಷಿಸಬೇಕಾಗಿ ಕೋರಿರುತ್ತಾರೆ.

ಮೇಲಿನ ಮನವಿಗಳನ್ನು ಪರಿಶೀಲನೆ ಮಾಡಲಾಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ದಿನಾಂಕ: 12.09.2016 ರಂದು ಮುಸ್ಲಿಂ ಬಾಂಧವರು ಬಕ್ರೀದ್ ಹಬ್ಬವನ್ನು ಆಚರಣೆ ಮಾಡುತ್ತಿರುವುದರಿಂದ ಶ್ರೀ ಟಿ. ವೆಂಕಟೇಶ, ಭಾ.ಆ.ಸೇ ಜಿಲ್ಲಾಧಿಕಾರಿ ಉಡುಪಿ ಜಿಲ್ಲೆ ಆದ ನಾನು ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಉಡುಪಿ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಿಗೆ ದಿನಾಂಕ: 12.09.2016 ರಂದು ರಜೆ ಘೋಷಿಸಿರುತ್ತೇನೆ ಹಾಗೂ ದಿನಾಂಕ: 13.09.2016 ರಂದು ಎಲ್ಲಾ ಶಾಲಾ ಕಾಲೇಜುಗಳು ಎಂದಿನಂತೆ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

ಜಿಲ್ಲಾಧಿಕಾರಿ, 9/9/16
ಉಡುಪಿ ಜಿಲ್ಲೆ,ಉಡುಪಿ

ರಿಗೆ,

1. ಉಪಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ ಕೊಣಾಜೆ ಮಂಗಳೂರು
2. ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ರಜತಾದ್ರಿ ಮಣಿಪಾಲ ಉಡುಪಿ
3. ಉಪ ನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ರಜತಾದ್ರಿ ಮಣಿಪಾಲ ಉಡುಪಿ